**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 6701/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ದಿನಾಂಕಃ** 01.07.2026 **ಸಿಡಬ್ಲ್ಯೂ 1**

| | |
|---|---|
| ಹೆಸರು | ಶಂಕರ್ ಗುಡದಾಳ್ |
| ತಂದೆಯ ಹೆಸರು | ಮಹಾದೇವ್ |
| ವಯಸ್ಸು | 40 ವರ್ಷ |
| ಉದ್ಯೋಗ | ಅಬಕಾರಿ ನಿರೀಕ್ಷಕರು, ಅಬಕಾರಿ ಆಯುಕ್ತರ ಕಚೇರಿ, ಬೆಂಗಳೂರು |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ05.02.2024 ರಿಂದ ದಿಃ10.06.2024 ರವರೆಗೆ ಅಬಕಾರಿ ನಿರೀಕ್ಷಕರಾಗಿ ಹರಿಹರ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 18.03.2024 ರಂದು ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವ ಸಂಬಂಧ ನಾನು ಮತ್ತು ನನ್ನ ಸಿಬ್ಬಂದಿ ವಿನಾಯಕ ಮತ್ತು ಅರುಣಕುಮಾರರವರೊಂದಿಗೆ ಇಲಾಖಾ ವಾಹನದಲ್ಲಿ ಹರಿಹರ ನಗರದಲ್ಲಿ ಗಸ್ತು ಮಾಡುತ್ತಿರುವಾಗ ಬಂದ ಬಾತ್ಮಿ ಮೇರೆಗೆ ಹರಿಹರ ತಾ. ಹಳೇ ಹರ್ಲಾಪುರ ಗ್ರಾಮದ ಹೊಳೆಯ ರಸ್ತೆಯ ಕ್ರಾಸ್ ನಲ್ಲಿ ಅಲ್ಲಿದ್ದ ಇಬ್ಬರು ಸ್ಥಳೀಯರಿಗೆ ಬಾತ್ಮಿ ವಿಷಯ ತಿಳಿಸಿ ಪಂಚರಾಗಿ ನೇಮಿಸಿಕೊಂಡು ಅಲ್ಲಿ ಅನುಮಾನಾಸ್ಪದ ವಾಹನಗಳನ್ನು ತಪಾಸಣೆ ಮಾಡ್ತುರುವಾಗ ಸಂಜೆ 6 ಗಂಟೆ ಸುಮಾರಿಗೆ ಒಬ್ಬ ವ್ಯಕ್ತಿಯು ಹರಿಹರ ನಗರ ಕಡೆಯಿಂದ ಒಂದು ದ್ವಿಚಕ್ರ ವಾಹನದಲ್ಲಿ ರಟ್ಟಿನ ಪೆಟ್ಟಿಗೆಗಳನ್ನು ಇಟ್ಟುಕೊಂಡು ನಾವು ನಿಂತಿರುವ ಕಡೆ ಬರುತ್ತಿದ್ದು ಸದರಿ ವ್ಯಕ್ತಿಯನ್ನು ವಾಹನವನ್ನು ನಿಲ್ಲಿಸಲು ಸೂಚಿಸಲಾಗಿ ಆ ವ್ಯಕ್ತಿ ರಸ್ತೆಯ ಬದಿಯಲ್ಲಿ ದ್ವಿಚಕ್ರ ವಾಹನ ಹಾಗೂ ರಟ್ಟಿನ ಪೆಟ್ಟಿಗೆ ನಿಲ್ಲಿಸಿ ಜನಸಂದಣಿಯಲ್ಲಿ ಓಡಿ ಹೋಗಿ ತಲೆಮರೆಸಿಕೊಂಡನು. ಆರೋಪಿಯನ್ನು ಹುಡುಕಲಾಗಿ ಆತನು ಸಿಕ್ಕಿರುವುದಿಲ್ಲ. ನಂತರ ನ್ಯಾಯಾಲಯದಿಂದ ಶೋದನಾ ವಾರಂಟನ್ನು ಪಡೆಯಲು ಅವಕಾಶ ಇಲ್ಲದ ಕಾರಣ ಶೋಧನಾ ಸಮುಚಿತ ಆದಾರವನ್ನು ಸ್ಥಳದಲ್ಲಿಯೇ ತಯಾರಿಸಿಕೊಂಡು ಶೋದನೆ ಮಾಡಿದಾಗ 8 ರಟ್ಟಿನ ಪೆಟ್ಟಿಗೆಗಳಿದ್ದು ಅವುಗಳಿಂದ 5 ರಟ್ಟಿನ ಪೆಟ್ಟಿಗೆಗಳಲ್ಲಿ ಒರಿಜಿನಲ್ ಚಾಯ್ಸು ವಿಸ್ಕಿಯ 90 ಎಂಎಲ್ 480 ಮದ್ಯದ ಟೆಟ್ರಾ ಪ್ಯಾಕೆಟಗಳು ಮತ್ತು 3 ರಟ್ಟಿನ ಪೆಟ್ಟಿಗಗಳಲ್ಲಿ ಹೈವಾಟ್ಸ ಚಿಯರ್ಸ ವಿಸ್ಕಿಯ 90 ಎಂಎಲ್ 288 ಮದ್ಯದ ಟೆಟ್ರಾ ಪ್ಯಾಕೆಟ ಗಳು ಇದ್ದು ಒಟ್ಟು 69.120 ಲೀ. ಮದ್ಯ ಹಾಗೂ ಹಸಿರು ಬಣ್ಣದ ದ್ವಿಚಕ್ರ ವಾಹನ ಟಿವಿಎಸ್ ಎಕ್ಸೆಲ್ 100 ಸಂ.ಕೆಎ-17 ಇಯು-5911 ಇರುವುದು ಕಂಡು ಬಂದಿತು. ನಂತರ ಸದರಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳಿಂದ ತಲಾ 10 ರಂತೆ ಒಟ್ಟು 80 ಮದ್ಯದ ಟೆಟ್ರಾ ಪ್ಯಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಸ್ಯಾಂಪಲ್ ತೆಗೆದು ಒಂದು ಬಿಳಿ ಬಣ್ಣದ ಬಟ್ಟೆ ಚೀಲದಲ್ಲಿ ಹಾಕಿ ಕಚೇರಿ ಸೀಲ್‌ನಿಂದ ಸೀಲ್ ಮಾಡಿ ಮಾದರಿ ಗುರುತಿನ ಚೀಟಿಯನ್ನು

ತಯಾರಿಸಿ ನಾನು ಹಾಗೂ ಪಂಚರು ಸಹಿ ಮಾಡಿ ಸ್ಯಾಂಪಲ್ ಹಾಗೂ ಮು.ಮಾ.ಗಳಿಗೆ ಅಂಟಿಸಲಾಯಿತು. ಓಡಿ ಹೋದ ಆರೋಪಿಯ ಬಗ್ಗೆ ಪಂಚರನ್ನು ವಿಚಾರಿಸಲಾಗಿ ಆತನ ಹೆಸರು ರಾಮಪ್ಪ ತಂದೆ ಕರೆಹನುಮಂತಪ್ಪ, ಹರಿಹರ ತಾ. ಅಂತ ತಿಳಿಸಿರುತ್ತಾರೆ. ನಂತರ ಪಂಚನಾಮೆಯನ್ನು ಸಂಜೆ 6.20 ರಿಂದ 7.30 ಗಂಟೆವರೆಗೆ ಜರುಗಿಸಿ ಮು.ಮಾ.ನೊಂದಿಗೆ ಕಚೇರಿಗೆ ತೆರಳಿ, ಆರೋಪಿತರ ವಿರುದ್ಧ ದೂರು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮುಂದಿನ ತನಿಖೆಯನ್ನು ತನಿಖಾಧಿಕಾರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ಶೋಧನಾ ಸಮುಚಿತ ಆದಾರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.1 ಎ, ಪಂಚನಾಮೆ ನಿಪಿ.2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.2 ಎ, ಮಾದರಿ ಸೀಲು ನಮೂನೆ ನಿಪಿ.3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.3 ಎ, ಜಪ್ತು ಪಟ್ಟಿ ನಿಪಿ.4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.4 ಎ, ದೂರು ನಿಪಿ.5 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.5 ಎ, ಪ್ರ.ವ.ವರದಿ ನಿಪಿ.6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.1 ರಿಂದ 80 ಟೆಟ್ರಾ ಪ್ಯಾಕೆಟ್‌ಗಳನ್ನು ಹಾಗೂ 8 ರಟ್ಟಿನ ಬಾಕ್ಸ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.81 ರಿಂದ 88 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಶ್ರೀ ಕೆ ಸಿ ಬಿ ವಕೀಲರಿಂದಃ

ನಾವು ಸದರಿ ದಿನ ಸಂಜೆ 5.30 ರಿಂದ ಗಸ್ತು ಕಾರ್ಯ ನಿರ್ವಹಿಸುತ್ತಿದ್ದೆನು. ನಮ್ಮ ಕಚೇರಿಯು ಹರಿಹರದ ಶಿವನಾಗಪ್ಪ ಕಾಂಪೌಂಡ್ ನಲ್ಲಿದೆ. ನನಗೆ ಮೇಲಾಧಿಕಾರಿಗಳಿಂದ ಯಾವುದೇ ಲಿಖಿತ ಆದೇಶ ಬಂದಿರುವುದಿಲ್ಲ ಮೌಖಿಕವಾಗಿ ತಿಳಿಸಿರುತ್ತಾರೆ. ದೂರಿನಲ್ಲಿ ಮೌಖಿಕ ಆದೇಶದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಚಾಸಾ.2, 3 ಹಾಗೂ ನಾನು ಸದರಿ ದಿನ ಕರ್ತವ್ಯದಲ್ಲಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ. ಹರ್ಲಾಪುರ ಗ್ರಾಮದ ಹೊಳೆಯ ರಸ್ತೆಯ ಕ್ರಾಸ್‌ನಲ್ಲಿ ಪಂಚರು ಇದ್ದರು ಅವರನ್ನು ಪಂಚನಾಮೆಗೆ ಕರೆದುಕೊಂಡು ಹೋಗಿರುತ್ತೇನೆ. ಅವರು ಸಂಜೆ 5.50 ರಿಂದ ಪಂಚನಾಮೆ ಮುಗಿಯುವವರೆಗೂ ಇದ್ದರು. ಗುನ್ನಾ ಸ್ಥಳವು ಹಳ್ಳಿಯ ರಸ್ತೆ ಎಂದರೆ ಸರಿಯಲ್ಲ. ಆರೋಪಿತನು ಅಲ್ಲಿಗೆ ಬಂದಿರುವುದಿಲ್ಲ ಓಡಿ ಹೋಗಿರುವುದಿಲ್ಲ ನಾನು ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾರ್ವಜನಿಕರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಮು.ಮಾ.ಗಳು ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯು ಸಿಗಬಹುದು ಎಂದು ಉತ್ತರಿಸುತ್ತಾರೆ. ಮದ್ಯದ ಅಂಗಡಿಗಳಲ್ಲಿ ಟೆಟ್ರಾ ಪ್ಯಾಕೆಟಗಳನ್ನು ಕೇಳಿದಾಗ ಅಂಗಡಿಯ ಮಾಲೀಕರು ಕೊಡುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಮು.ಮಾ.ಗಳಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಕಚೇರಿಯ ಅಂಕಿ ಸಂಖ್ಯೆ ಗೋಸ್ಕರ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗುನ್ನಾ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ.ಗಳಲ್ಲಿರುವ ಸಹಿಗಳನ್ನು ನಾನು ಕಚೇರಿಯಲ್ಲಿಯೇ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.